ಒ ಎಸ್ 22/2020 ಪಿ.ಡಬ್ಲ್ಯೂ:1

ಇಂದು ದಿಃ 03.06.2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ 2 ರಿಂದ 6ನೇ ಪ್ರತಿವಾದಿಗಳ ಪರ ಶ್ರೀ ಎಂ ಜೆ ಎಸ್ ವಕೀಲರಿಂದಃ

ಗೆಜ್ಜಗಳ್ಳಿಯಲ್ಲಿ ನಾನು ಈಗ ಹಾಲಿ ವಾಸ ಇದ್ದು, ಅಲ್ಲೇ ನಾನು ಹುಟ್ಟಿ ಬೆಳೆದು ವಿಧ್ಯಾಭ್ಯಾಸ ಮಾಡಿದ್ದೇನೆ. ನಾನು ಐ ಟಿ ಐ ಓದಿದ್ದೇನೆ. ದಾವೆಯ ಜೊತೆ ಹಾಜರುಪಡಿಸಿರುವ ದಾಖಲೆಗಳು ಯಾವ ಸ್ವರೂಪದ್ದು ಎಂದು ನಾನು ಓದಿ ತಿಳಿದುಕೊಂಡಿದ್ದೇನೆ. ದಾವೆಯಲ್ಲಿ ಸುಮಾರು ಜಮೀನುಗಳು ಇದ್ದು ಅವುಗಳು ಯಾವುದು ಎಂದು ಸ್ಪಷ್ಟವಾಗಿ ಗೊತ್ತಿಲ್ಲ ಆದರೆ 7 ರಿಂದ 8 ಜಮೀನುಗಳು ಇವೆ. ದಾವಾ ಆಸ್ತಿಯ ಕೆಲವು ಸರ್ವೆ ನಂಬರ್ ಗಳನ್ನು ಹೇಳಬಹುದು. ಹಳ್ಳಿಕೆರೆಹುಂಡಿ ಗ್ರಾಮದಲ್ಲಿ ಗ್ರಾಮದೇವರ ಉತ್ಸವ ಪ್ರತಿ ಶ್ರಾವಣ ಮಾಸಕ್ಕೆ ಆಗುತ್ತದೆ. ದಾವಾ ಜಮೀನುಗಳನ್ನು ನಾನು ಖುದ್ದಾಗಿ ನೋಡಿದ್ದೇನೆ. ದಾವಾ ಜಮೀನುಗಳ ಪೈಕಿ ಕೆಲವು ಖುಷ್ಕಿ, ಕೆಲವು ಪಂಪ್ ಸೆಟ್ ಜಮೀನುಗಳು ಇವೆ. ಜಮೀನುಗಳಲ್ಲಿ ಒಟ್ಟು 3 ಪಂಪ್ ಸೆಟ್ ಇರಬೇಕು. ಯಾವ ಜಮೀನಿನಲ್ಲಿ ಪಂಪ್ ಸೆಟ್ ಇದೆ ಎಂದು ಸ್ಪಷ್ಟ ಮಾಹಿತಿ ಇಲ್ಲ. ಆ ಪಂಪ್ ಸೆಟ್ ಗಳನ್ನು ಯಾರು ಯಾವ ವರ್ಷದಲ್ಲಿ ಅಳವಡಿಸಿದ್ದರು ಎನ್ನುವ ಮಾಹಿತಿ ನನಗೆ ಇಲ್ಲ. ದಾವಾ ಜಮೀನಿನಲ್ಲಿ ಯಾವುದಾದರೂ ಸಾಲ, ವ್ಯವಹಾರ, ಭೋಗ್ಯ ಮಾಡಿರುವ ಬಗ್ಗೆ ನನ್ನ ಗಮನಕ್ಕೆ ಬಂದಿಲ್ಲ.

ಒಂದು ಆರ್ ಟಿ ಸಿ ಯಲ್ಲಿ ಮಹೇಶ ಎಂದು ಇದ್ದು ಅವರು ಯಾರು ಎಂದು ತಿಳಿದುಕೊಳ್ಳುವ ಪ್ರಯತ್ನ ಮಾಡಿಲ್ಲ. ಜ್ಯೋತಿ ಮತ್ತು ಶಿವಕುಮಾರವರು ನನ್ನ ಚಿಕ್ಕಮ್ಮ ಮತ್ತು ಚಿಕ್ಕಪ್ಪ. ಅವರು ಮಹೇಶ ಎನ್ನುವವರಿಗೆ ಜಮೀನು ಕೊಟ್ಟಿದ್ದು ಅದು ಆರ್ ಟಿ ಸಿಯಲ್ಲಿ ನಮೂದು ಇರುವ ಬಗ್ಗೆ ನಾನು ತಿಳಿದುಕೊಂಡಿಲ್ಲ. ಯಾರಿಗೆಲ್ಲ ಜಮೀನು ಮಾರಾಟ ಮಾಡಿದ್ದಾರೆ ಎಂದು ನಾನು ಈಗ ಮಾಹಿತಿ ಕಲೆ ಹಾಕುತ್ತಿದ್ದು ಮುಂದಕ್ಕೆ ನೊಟೀಸ್ ಕೊಡುತ್ತೇನೆ. ಪಾಟೀ ಸವಾಲಿನಲ್ಲಿ ಪ್ರಶ್ನೆ ಕೇಳಿ ಏನೆಲ್ಲಾ ವಿಚಾರಗಳು ಮತ್ತು ಸಂಗತಿಗಳು ಬಿಟ್ಟು ಹೋಗಿದೆ ಎಂದು ತಿಳಿದುಕೊಂಡು ನ್ಯೂನತೆಯನ್ನು ಸರಿಪಡಿಸಿಕೊಳ್ಳಲು ನಾನು ಅರ್ಧ ವಿಚಾರ ತಿಳಿದುಕೊಂಡಿರುತ್ತೇನೆ ಎಂದರೆ ಸುಳ್ಳು. ಮಾಹಿತಿ ಕಲೆ ಹಾಕಲು ನನಗೆ 1 ತಿಂಗಳ ಸಮಯ ಬೇಕಾಗುತ್ತದೆ. ಈ ದಾವೆಯ 1ನೇ ಪ್ರತಿವಾದಿ ಹೆಚ್ ಜಿ ಮಾಹದೇವಪ್ಪರವರ ಜೊತೆ ಎದುರುಗಡೆ ಸಿಕ್ಕಾಗ ಮಾತನಾಡುತ್ತೇನೆ, ವಿಶ್ವಾಸದಲ್ಲಿ ಇಲ್ಲ. ಅವರೇ ನನಗೆ ವಿಚಾರಣೆಗೆ ಮಾಹಿತಿ ಕೊಟ್ಟಿದ್ದಾರೆ ಎಂದರೆ ಸುಳ್ಳು.

2 ರಿಂದ 6ನೇ ಪ್ರತಿವಾದಿಗಳ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಿದರು. ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ, ನಂಜನಗೂಡು.